ಮಲ್ಲಿಕಾರ್ಜುನ, ಸುರಧೇನುಪುರ
ಪತಿ ಕಿತಾಪತಿಯಾದರೆ ಸತಿ?



ಅಂಕುಶಮತಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಆರತಿ ತಟ್ಟೆ; ಇದರ ನಿಜವಾದ ಅರ್ಥ?
ಎಂತೆಂತಹವರಿಗೂ ಮುಖಕ್ಕೆ ಮಂಗಳಾರತಿ ಎತ್ತಲು ಸಿದ್ಧವಿರುವ ಸಾಧನ.

ಜಯಶ್ರೀ, ಬೆಂಗಳೂರು
ನೈಜ ಸಂಸಾರಕ್ಕೂ, ಧಾರಾವಾಹಿ ಸಂಸಾರಕ್ಕೂ ಏನು ವ್ಯತ್ಯಾಸ?
ನೈಜದಲ್ಲಿ ಧಾರಾವಾಹಿ ಸಂಸಾರಕ್ಕೆ ಸಿಕ್ಕಷ್ಟು ಸುಲಭವಾಗಿ ಸುಪಾರಿಯವರು ಸಿಗುವುದಿಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು
ಪೆಣ್ ಡ್ರೈವ್ ಸ್ತ್ರೀಲಿಂಗವೋ, ಪುಲ್ಲಿಂಗವೋ?



ಗೋಪ್ಯತೆಯಿದ್ದು, ಹೋದೆಡೆ ಗಮನ ಸೆಳೆಯುವುದರಿಂದ, ಸ್ತ್ರೀಲಿಂಗವೇ.

ರತ್ನಜ, ಮೈಸೂರು
ವಿದುರರಿಗಿಂತ ವಿಧವೆಯರು ದೀರ್ಘಕಾಲ ಬದುಕುವ ಗುಟ್ಟೇನು ರಾಮ್?
ವಿದುರ ಸ್ವಯಂಪಾಕದಿಂದ ಅಪ್‌ಸೆಟ್ ಆಗುತ್ತಾನೆ. ವಿಧವೆ ಸ್ವಯಂಪಾಕದಿಂದ ಸೆಟಪ್ ಆಗುತ್ತಾಳೆ.

ಜಗದೀಶ ಬಿ. ಹೊಸೂರು, ಮೈಸೂರು
ಸ್ನೇಹಕ್ಕಿಂತ ದೊಡ್ಡದಿಲ್ಲ. ಸ್ನೇಹಿತರೇ ಮೋಸ ಮಾಡಿದಾಗ?
ಅವರಿಗೆ ಸ್ನೇಹಕ್ಕಿಂತಲೂ ದೊಡ್ಡದಿದೆ ಎಂದು ತಿಳಿದಿದೆ ಎಂದು ನಮಗೆ ತಿಳಿಯುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಪರೀಕ್ಷೆಯಲ್ಲಿ ಬಡವರ ಮಕ್ಕಳೇ ಹೆಚ್ಚು ಅಂಕ ಪಡೆಯುತ್ತಾರಲ್ಲ?
ಕತ್ತಲಲ್ಲಿರುವವರಿಗೆ ಬೆಳಕಿನ ಅವಶ್ಯಕತೆ ಹೆಚ್ಚು ತಿಳಿದಿರುತ್ತದೆ.

ಅನಸೂಯ ಟಿ., ಕೇದಿಗೆಮನೆ
ಚಿನ್ನದ ಬೆಲೆ ಗಗನಕ್ಕೇರಿದ್ದರೂ ಚಿನ್ನದ ಮೇಲಿನ ನನ್ನ ಆಸೆ ಭೂಮಿಗಿಳಿಯಲಿಲ್ಲ. ಏಕೆ?
ಜಾಹೀರಾತುಗಳು ಮಾರೀಚನಂತೆ ಸುಳಿಸುಳಿದು ಸೆಳೆಸೆಳೆಯುವುದರಿಂದ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಕೋಳಿ ಕುರಿಗಳನ್ನು ಬಲಿ ಕೇಳುವ ಹೆಣ್ಣು ದೇವತೆಗಳು ಮನುಷ್ಯರನ್ನೇಕೆ ಬಲಿ ಕೇಳುವುದಿಲ್ಲ?
ಮನುಷ್ಯರನ್ನು ಜೀರ್ಣಿಸಿಕೊಳ್ಳುವುದು ದೇವತೆಗಳಿಗೂ ಬಹಳ ಕಷ್ಟವಂತೆ.

ಸಿ.ಕೆ. ಗಣಪ್ಪನವರ, ಮುಂಡರಗಿ
ರಾಜಕಾರಣಿಗಳಿಗೆ ಪಾಪಪ್ರಜ್ಞೆ ಕಾಡುವುದಿಲ್ಲವೆ?
ಕಾಡುತ್ತದೆ! 'ನನ್ನ ಪಾಪನಿಗೆ ಸೀಟ್ ಕೊಡಿ; ನನ್ನ ಪಾಪನ್ನ ರೈಡಿಂದ ಉಳಿಸಿ' ಎಂದೆಲ್ಲ ಬೇಡುವರಲ್ಲ!

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಸೃಷ್ಟಿಕರ್ತನು ವಿಭಿನ್ನವಾಗಿರದೆ ನಮ್ಮಂತೆಯೇ ಶರೀರವುಳ್ಳವನಾಗಿ ಇರುವನೇಕೆ ಸರ್?
ಅವನನ್ನು ರೂಪಿಸುವಲ್ಲಿ ನಮಗಿರುವ ಮಿತಿಯದು. ಮೀನಿನ ದೇವರು ಮೀನಿನಂತೆಯೇ ಇರುತ್ತಾನೆ.

ಡಾ.ಸೀಮಂತಿನಿ ದೇಸಾಯಿ, ಬೆಂಗಳೂರು
ಎಲೈ ಉತ್ತರಭೂಪನೆ, ನನ್ನ ಪ್ರಶ್ನೆಗೆ ಉತ್ತರಿಸದಿದ್ದಕ್ಕಾಗಿ ಸೋಲೊಪ್ಪಿಕೊಳ್ಳುವೆಯಾ?
ಎಲೈ ಪ್ರಶ್ನಾಂಕಳೆ, ಒದರು ನಿನ್ನ ಪ್ರಶ್ನೆಯನ್ನು. ನಿನ್ನ soul ಸಹ ಒಪ್ಪುವಂತೆ ಉತ್ತರಿಸುವೆ.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ನೋವಿಗೂ, ಸಾವಿಗೂ ಇರುವ ಅಂತರವೇನು?
ನೋವು ಅಲಾರ್ಮ್ ಬೆಲ್; ಸಾವು ಫೈನಲ್ ಕಾಲ್.

## ಬಹುಮಾನಿತ ಪ್ರಶ್ನೆ

ಕೆ. ಶ್ರೀನಿವಾಸ, ಬೆಂಗಳೂರು
ವಾಲಿ ಸುಗ್ರೀವ ಇವರೆಲ್ಲ ಮಂಗಗಳು; ಇವರ ಪತ್ನಿಯರೇಕೆ ಸುಂದರ ಸ್ತ್ರೀಯರು?
ಆ ಕಾಲದಲ್ಲಿ ಗಂಡು ಕೋತಿಯಂತಿದ್ದರೂ ಸುಂದರಿಯರು ಒಪ್ಪಿಕೊಳ್ಳುತ್ತಿದ್ದರು.

ಮಂಡಿ ಕುಮಾರ್, ಬೆಂಗಳೂರು
ಕನ್ನಡ ಇಂಪು, ಕಂಪು. ಏಕೆ?
ಸುಸಂಸ್ಕೃತ ಹಿನ್ನೆಲೆ ಇರುವುದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ರಾಮಾ ರಾಮಾ ಎನ್ನುವುದಕ್ಕೂ, ರಾಮ್ ರಾಮ್ ಎನ್ನುವುದಕ್ಕೂ ವ್ಯತ್ಯಾಸವೇನು?
ಅದು ಹಣೆ ಚಚ್ಚಿಕೊಳ್ಳುವಾಗ; ಇದು ಒಬ್ಬರನ್ನು ನಾಲ್ವರು ಹೊತ್ತಿರುವಾಗ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ದೇವಾಲಯಕ್ಕೂ, ಗ್ರಂಥಾಲಯಕ್ಕೂ ಏನು ವ್ಯತ್ಯಾಸ?



ಅಲ್ಲಿ ಭಕ್ತಿ, ಭಜನೆ, ಸ್ತುತಿ; ಇಲ್ಲಿ ವಿಭಕ್ತಿ, ವಿಭಜನೆ, ಪ್ರಸ್ತುತಿ...

ಕಾವ್ಯಶ್ರೀ, ಶೋರಾಪೂರ
ಹುಡುಗರು ಐಸ್‌ಕ್ರೀಂನಂತೆ ಕರಗೋದ್ಯಾವಾಗ?
ಹುಡುಗಿಯರು ಗಡ್‌ಬಡ್ ಮಾಡಿಕೊಂಡಾಗ.

ಕೆ.ಎಂ. ವಿಭೂತಿ, ಹರಿಹರ
ಕೈಸಾಲಕ್ಕೂ, ಕೈಲಾಸಕ್ಕೂ ಏನಾದರೂ ಸಂಬಂಧವಿದೆಯಾ?
ಲಕ್ಷ್ಮಿಯ ಸಂಬಂಧವೇ. ಅವಳು ಕೈಗೆಟುಕದಿದ್ದರೆ ಕೈಸಾಲ. ಕಾಲ ಮುರಿದುಕೊಂಡು ಕುಳಿತರೆ ಕೈಲಾಸ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಪದಿನಾರು ವೈದಿನಿಲೆ ಪರಭಾರೆ ಆಗಿಲ್ಲವೆಂದು ತಿಳಿಯುವುದು ಹೇಗೆ?
'ನಿನ್ನ ಮೊಬೈಲ್ ಲಾಕ್ ಓಪನ್ ಮಾಡಿ ಕೊಡು' ಎನ್ನಿ. ಕೊಟ್ಟರೆ ಪರಭಾರೆ ಆಗಿಲ್ಲ.

■ ರಾಮ್